BENGALURU CENTRAL UNIVERSITY

# ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ

**ಪ್ರೊ. ಎಸ್. ಜಾಫೆಟ್**
**ಕುಲಪತಿ**

ಸಂಖ್ಯೆ: ಬೆಂ.ಕೇ.ವಿ/ಕುಲಪತಿ/FRC/41/2019-20

ದಿನಾಂಕ: 17.08.2019

ಅತೀ ಜರೂರು

ಇವರಿಗೆ,

ಪ್ರಾಂಶುಪಾಲರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು
ಬೆಂಗಳೂರು.

ಮಾನ್ಯರೇ,

**ವಿಷಯ ಪ್ರಕೃತಿ ವಿಕೋಪಕ್ಕೆ ಒಳಗಾದ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯ ಹಾಗೂ ಪುನರ್ ವ್ಯವಸ್ಥೆಗೆ ಸಹಕಾರ ನೀಡುವ ಬಗ್ಗೆ.**

*****

ಇತ್ತೀಚೆಗೆ ಅನಿರೀಕ್ಷಿತವಾಗಿ ಕೆಲವು ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ಉಂಟಾಗಿರುವುದು ತಮಗೆ ತಿಳಿದಿದೆ. ಈಗಾಗಲೇ ಜಿಲ್ಲಾಡಳಿತ, ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರದಿಂದ ಸಮಾರೋಪಾದಿಯಲ್ಲಿ ಅಲ್ಲಿಯ ಪುನರ್ ವ್ಯವಸ್ಥೆ ಮತ್ತು ಪರಿಹಾರ ಕಾರ್ಯ ನಡೆಯುತ್ತಿದೆ. ಈಗಾಗಲೇ ಹಲವು ಕಾಲೇಜುಗಳು ಪರಿಹಾರ ಕಾರ್ಯದಲ್ಲಿ ತೊಡಗಿಸಗೊಂಡಿದ್ದು ಸಂತೋಷಕರವಾಗಿದೆ. ಈ ದೃಷ್ಟಿಯಿಂದ ಇಂತಹ ಸಂಕಷ್ಟದ ಸಮಯದಲ್ಲಿ ಸಹೃದಯವಾಗಿ ಸ್ಪಂಧಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಒಳಪಡುವ ಎಲ್ಲಾ ಕಾಲೇಜುಗಳ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್), ಎನ್.ಸಿ.ಸಿ, Rotaract Clubs, Red Cross, Scouts and Guides ಹಾಗೂ ಮುಂತಾದ ಘಟಕಗಳು ಇದರಲ್ಲಿ ತೊಡಗಿಸಿಕೊಳ್ಳಲು ಎಲ್ಲಾ ರೀತಿಯ ಮಾರ್ಗ ದರ್ಶನವನ್ನು ಪ್ರಾಂಶುಪಾಲರುಗಳು ನೀಡಬೇಕೆಂದು ಕೋರುತ್ತಿದ್ದೇನೆ.

1. ಪುನರ್ ವ್ಯವಸ್ಥೆಗೆ ಸಂಬಂಧಿಸಿದಂತೆ ನಿಧಿ ಸಂಗ್ರಹವು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ಪ್ರಾಂಶುಪಾಲರ ಅನುಮತಿ ಪಡೆದು ಅವರ ನೇತೃತ್ವದಲ್ಲಿಯೇ ನಿಧಿ ಸಂಗ್ರಹ ಮಾಡಬೇಕು. ಸಂಗ್ರಹಿಸಿದ ನಿಧಿಯನ್ನು ಮುಖ್ಯ ಮಂತ್ರಿ ಇವರ ಪ್ರಕೃತಿ ವಿಕೋಪ ನಿಧಿಗೆ ನೀಡಲಾಗುವುದು. ಈ ನಿಧಿಗೆ ತೆರಿಗೆ ಕಾಯಿದೆ 80ಜಿ ಅಡಿ ಪೂರ್ಣ ತೆರಿಗೆ ವಿನಾಯಿತಿ ಇದೆ. ಪ್ರಾಂಶುಪಾಲರು ಪಾರದರ್ಶಕವಾಗಿ ನಿಧಿ ಸಂಗ್ರಹಿಸುವ ಕಡೆಗೆ ಮಾರ್ಗದರ್ಶನ ಮಾಡತಕ್ಕದ್ದು. ಸ್ವಯಂ ಸೇವಕರಿಗೆ ಸ್ವತಂತ್ರವಾಗಿ ನಿಧಿ ಸಂಗ್ರಹಿಸಲು ಅವಕಾಶ ನೀಡಬಾರದು. ಸಂಗ್ರಹಿಸಿದ ನಿಧಿಯನ್ನು ನೇರವಾಗಿ ವಿಶ್ವವಿದ್ಯಾಲಯಕ್ಕೆ ಡಿ.ಡಿ ಅಥವಾ ಚೆಕ್ ಮೂಲಕ ಕಳುಹಿಸಿಕೊಡತಕ್ಕದ್ದು. ವಿಶ್ವವಿದ್ಯಾಲಯದಿಂದ ಹೀಗೆ ಕಾಲೇಜುಗಳಿಂದ ಸಂಗ್ರಹವಾದ ನಿಧಿಯನ್ನು ಆಯಾಯ ಕಾಲೇಜುಗಳ ಹೆಸರುಗಳನ್ನು ನಮೂದಿಸಿ ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಖಾತೆಗೆ ಜಮಾ ಮಾಡಲಾಗುತ್ತದೆ.
2. ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವತಿಯಿಂದ ನೇರವಾಗಿ ಸಂತ್ರಸ್ಥರಿಗೆ ತಲುಪಿಸಲಾಗುವುದು.
3. ಕಾಲೇಜುಗಳು ಸಂಗ್ರಹಿಸಿದ ವಸ್ತುಗಳನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣ, ಸಮಾಜಕಾರ್ಯ ವಿಭಾಗ / ಎನ್.ಎಸ್.ಎಸ್ ಕಛೇರಿಗೆ ತಲುಪಿಸಲು ಕೋರಲಾಗಿದೆ.

ಈ ಮಾನವೀಯ ಕಾರ್ಯದ ಬಗ್ಗೆ ಪ್ರಾಂಶುಪಾಲರುಗಳು ಸ್ವತಃ ಗಮನ ಹರಿಸಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಲು ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಮೊ:9483865095, 8050552959, 9844169326 ಸಂಪರ್ಕಿಸಿ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎಸ್. ಜಾಫೆಟ್)